ನಾನು ಕಂಡ ವಿವೇಕಾನಂದ



ಡಾ.ಆರ್. ಬಾಲಸುಬ್ರಹ್ಮಣ್ಯಂ

# ಆ ಮೊದಲ ಸಮಾಗಮ...

ನಾವು ಯಾರಾದರೂ ವಿಶೇಷ ವ್ಯಕ್ತಿಯನ್ನು ಭೇಟಿಯಾದಾಗ, ಅವರಿಂದ ತೀವ್ರ ಪ್ರಭಾವಕ್ಕೊಳಗಾಗುವ ಸಂದರ್ಭ ಬದುಕಿನಲ್ಲಿ ಒಮ್ಮೊಮ್ಮೆ ಎದುರಾಗುತ್ತದೆ. ಈ ಭೇಟಿ ಕೆಲವೇ ನಿಮಿಷಗಳದ್ದಾಗಿರಬಹುದು. ಆದರೆ, ಅವರೊಡನೆ ಇನ್ನೂ ಸ್ವಲ್ಪ ಹೊತ್ತು ಇದ್ದು ಅವರ ಬಗ್ಗೆ ಇನ್ನಷ್ಟು ತಿಳಿಯಬೇಕಿತ್ತು ಎಂಬ ಭಾವನೆ ನಮ್ಮನ್ನು ಕಾಡತೊಡಗುತ್ತದೆ. ಒಂದು ರೀತಿಯ ಅವರ್ಣನೀಯ ಚೈತನ್ಯ ಹೊರಹೊಮ್ಮಿಸುವ ಅಂತಹ ವ್ಯಕ್ತಿಗಳು, ತಮ್ಮಿಂದ ದೂರಾಗುವುದು ಕಷ್ಟವೆನಿಸುವಂತಹ ಪ್ರಭಾವವನ್ನು ಬೀರಿರುತ್ತಾರೆ. ಈ ಭೇಟಿಯ ನಂತರ ನಮ್ಮ ಅಂತರ್ಯದಲ್ಲಿ ಏನೋ ಒಂದು ರೀತಿಯ ಬದಲಾವಣೆ ಆಯಿತು ಎನ್ನಿಸುವಂತಹ ಹಾಗೂ ಆ ಕ್ಷಣವನ್ನು ಸದಾ ನೆನಪಿನಲ್ಲಿ ಉಳಿಸಿಕೊಳ್ಳುವಂತಹ ಬಯಕೆ ನಮ್ಮಲ್ಲಿ ಮೂಡುತ್ತದೆ. ಶ್ರೀ ರಾಮಕೃಷ್ಣ ಪರಮಹಂಸ ಮತ್ತು ನರೇಂದ್ರನಾಥ ದತ್ತ ಅವರ ಭೇಟಿ ಕೂಡ ಇಂತಹ ಪ್ರಭಾವಿ ಭೇಟಿಗಳಲ್ಲಿ ಒಂದು. ಇದು ನರೇಂದ್ರರ ಜೀವನದ ದಿಕ್ಕನ್ನೇ ಬದಲಾಯಿಸಿದ್ದರ ಜತೆಗೆ ದಕ್ಷಿಣೇಶ್ವರದ ಉದಾತ್ತ ಸನ್ಯಾಸಿಯ ಚಿಂತನೆ ಮತ್ತು ತತ್ವಗಳನ್ನು ಪ್ರಚುರಪಡಿಸುವಂತಹ ಒಬ್ಬ ಶ್ರೇಷ್ಠ ಪ್ರಚಾರಕನನ್ನು ಜಗತ್ತಿಗೆ ಕೊಡುಗೆಯಾಗಿ ನೀಡಿತು.

ಯುವಕನಾಗಿದ್ದಾಗ ನರೇನ್ ಒಬ್ಬ ಕ್ರೀಡಾಪಟುವಿನ ಸದೃಢ ದೇಹದಾರ್ಢ್ಯ, ಕಂಚಿನ ಕಂಠ ಹಾಗೂ ಬೌದ್ಧಿಕ ಪ್ರಭೆಯನ್ನು ಹೊಂದಿದ್ದರು. ಕಾಲೇಜು ವ್ಯಾಸಂಗದ ಅವಧಿಯಲ್ಲಿ ಅವರು ಪಾಶ್ಚಿಮಾತ್ಯ ಚಿಂತನೆಗಳನ್ನು ಅಧ್ಯಯನ ಮಾಡಿ ಅರಗಿಸಿಕೊಂಡಿದ್ದರು. ಇದು ಅವರಲ್ಲಿ ಪ್ರಶ್ನಿಸುವ ಮನೋಭಾವವನ್ನು ಬೆಳೆಸಿತ್ತು. ತಮಗೆ ಜನ್ಮಜಾತವಾಗಿ ಬಂದಿದ್ದ ಆಧ್ಯಾತ್ಮಿಕ ಧೋರಣೆ, ಪುರಾತನ ಧಾರ್ಮಿಕ ಸಂಪ್ರದಾಯಗಳೆಡೆಗಿನ ಗೌರವ– ನಂಬಿಕೆಗಳು ಹಾಗೂ ತಮ್ಮ ಅಧ್ಯಯನದ ಫಲವಾಗಿ ಮೈಗೂಡಿಸಿಕೊಂಡಿದ್ದ ಪ್ರಶ್ನಾರ್ಥಕ ಮನೋಭಾವಗಳ ನಡುವೆ ಸಮನ್ವಯ ಸಾಧಿಸಿಕೊಳ್ಳಲು ಅವರು ಸತತವಾಗಿ ಪ್ರಯತ್ನಶೀಲರಾಗಿದ್ದರು. ಈ ನಿಟ್ಟಿನಲ್ಲಿ ಅವರು ಬ್ರಹ್ಮ ಸಮಾಜದ ಪ್ರಮುಖರು ಹಾಗೂ ವಿವಿಧ ಧರ್ಮಗಳ ಮುಖಂಡರನ್ನು ಕಂಡು ಚರ್ಚೆ ನಡೆಸಿದ್ದರಾದರೂ, ದೇವರ ಅಸ್ತಿತ್ವದ ಬಗ್ಗೆ ತಮ್ಮ ಪ್ರಶ್ನೆಗಳಿಗೆ ಅವರಿಂದ ಸಮಂಜಸವಾದ ಉತ್ತರ ಕಂಡುಕೊಳ್ಳುವಲ್ಲಿ ವಿಫಲರಾಗಿದ್ದರು. ಇಂತಹ ಒಂದು ತೊಳಲಾಟದ ಸಂದರ್ಭದಲ್ಲಿ, ಪ್ರೊಫೆಸರ್ ವಿಲಿಯಂ ಹೇಸ್ಟ್ ಅವರು ವರ್ಡ್ಸ್‌ವರ್ಥ್ ಕವಿ ತನ್ನ 'ದಿ ಎಕ್ಸ್‌ಕರ್ಷನ್' ಕವನದಲ್ಲಿ ವಿವರಿಸಿರುವ 'ಸಮಾಧಿ ಸ್ಥಿತಿ'ಯ (ಎಕ್‌ಸ್ಟಸಿ) ಬಗ್ಗೆ ತರಗತಿಯಲ್ಲಿ ವಿವರಿಸುತ್ತಿದ್ದರು. ಕೋಲ್ಕತ್ತ ನಗರದ ಹೊರವಲಯದ ದಕ್ಷಿಣೇಶ್ವರದಲ್ಲಿ ನೆಲೆಸಿರುವ ಸನ್ಯಾಸಿ ಅಂತಹ ಸಮಾಧಿ ಸ್ಥಿತಿಯನ್ನು ಅನುಭವಿಸಿದ್ದಾರೆಂದೂ ಅವರು ಉದಾಹರಿಸಿದರು. ನರೇಂದ್ರರ ಬಂಧು ರಾಮಚಂದ್ರ ದತ್ತ ಕೂಡ ಈ ಸನ್ಯಾಸಿಯನ್ನು ಭೇಟಿ ಮಾಡುವಂತೆ ನರೇಂದ್ರರನ್ನು ಪ್ರೇರೇಪಿಸಿದರು.

ಇದರ ಪರಿಣಾಮವಾಗಿ 1881ರಲ್ಲಿ ಈ ಇಬ್ಬರು ಮೇರು ವ್ಯಕ್ತಿಗಳ ಚಾರಿತ್ರಿಕ ಭೇಟಿ ನಡೆಯಿತು. ಆಗ ನರೇಂದ್ರರಿಗೆ 18ರ ಪ್ರಾಯ. ತಮ್ಮ ಕೆಲವು ಗೆಳೆಯರೊಂದಿಗೆ ರಾಮಕೃಷ್ಣರ ಕೊಠಡಿ ಪ್ರವೇಶಿಸಿದ ಅವರು, ಅಲ್ಲಿದ್ದವರ ಕೋರಿಕೆಯ ಮೇರೆಗೆ ಕೆಲವು ಹಾಡುಗಳನ್ನು ಹಾಡಿದರು. ಈ ಹಾಡುಗಳನ್ನು ಆಲಿಸುತ್ತಾ ರಾಮಕೃಷ್ಣರು ಸಮಾಧಿ ಸ್ಥಿತಿ ತಲುಪಿಯೇ ಬಿಟ್ಟರು. ಕೆಲವು ನಿಮಿಷಗಳ ನಂತರ ರಾಮಕೃಷ್ಣರು, ನರೇಂದ್ರರ ಕೈಯನ್ನು ಹಿಡಿದು ಹೊರಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವರೊಂದಿಗೆ ರಾಮಕೃಷ್ಣರು ತುಂಬಾ ಪ್ರೀತಿಯಿಂದ, ದೀರ್ಘಕಾಲದಿಂದ ಪರಿಚಿತರೇನೋ ಎಂಬಂತೆ ಮಾತನಾಡಿದರು. 'ನೀನು ಏಕೆ ಇಷ್ಟು ತಡವಾಗಿ ಬಂದೆ? ನನ್ನನ್ನು ಇಷ್ಟೊಂದು ದೀರ್ಘ ಕಾಲ ಕಾಯಿಸುವಷ್ಟು ಕಠಿಣ ಹೃದಯಿ ಏಕಾಗಿದ್ದೆ?'– ಎಂದು ಕೇಳಿದರು.

ನರೇಂದ್ರನು ಮಾನವ ಲೋಕದ ಕಷ್ಟಗಳನ್ನು ನಿವಾರಿಸಲು ಜನ್ಮವೆತ್ತಿರುವ ನಾರಾಯಣ ಎಂಬ ಭಾವನೆ ರಾಮಕೃಷ್ಣರಲ್ಲಿ ಮೂಡಿತ್ತು. ಈ ತಮ್ಮ ನಂಬಿಕೆಯನ್ನು ಇದೇ ಸಂದರ್ಭದಲ್ಲಿ ಸ್ವತಃ ನರೇಂದ್ರರಿಗೇ ಅವರು ತಿಳಿಸಿದರು. ಅವರ ಕೈಯನ್ನು ಹಿಡಿದು ಮತ್ತೊಮ್ಮೆ ಏಕಾಂಗಿಯಾಗಿ ಶೀಘ್ರವೇ ತಮ್ಮಲ್ಲಿಗೆ ಬರುವಂತೆ ಸೂಚಿಸಿದರು. ಆದರೆ ರಾಮಕೃಷ್ಣರ ಈ ವರ್ತನೆಗಳಿಂದ ದಿಗ್ಮೂಢರಾದ ನರೇಂದ್ರರಿಗೆ, ಈ ಹುಚ್ಚು ವ್ಯಕ್ತಿಯನ್ನು ನೋಡಲು ಇಷ್ಟು ದೂರ ಏಕಾದರೂ ಬಂದೆನೋ ಎಂಬ ಅನುಮಾನ ಶುರುವಾಯಿತು. ಆದರೆ, ಆ ಶಂಕೆಯೊಂದಿಗೇ ಗುರುವಿನ ಕೊಠಡಿಗೆ ವಾಪಸು ಬರುತ್ತಿದ್ದಂತೆ, ರಾಮಕೃಷ್ಣರು ಆಡಿದ್ದ ಮಾತುಗಳಲ್ಲಿ ಒಂದು ಅಂತರ್ಗತ ತರ್ಕ, ಮನಮುಟ್ಟುವಂತಹ ಪ್ರಾಮಾಣಿಕತೆ ಹಾಗೂ ತಮ್ಮ ಆಧ್ಯಾತ್ಮಿಕ ಸ್ವಭಾವಕ್ಕೆ ಒಪ್ಪುವಂತಹ ನಡೆ ನುಡಿಗಳು ಗೋಚರಿಸಿದವು. ನಂತರ ನರೇಂದ್ರ ಅವರು ರಾಮಕೃಷ್ಣರನ್ನು 'ನೀವು ದೇವರನ್ನು ನೋಡಿದ್ದೀರಾ? ಎಂದು ಕೇಳಿದಾಗ, 'ಹೌದು, ನಾನು ನಿನ್ನನ್ನು ಈಗ ಇಲ್ಲಿ ಹೇಗೆ ನೋಡುತ್ತಿದ್ದೇನೆಯೋ ಹಾಗೇ ದೇವರನ್ನು ಕೂಡ ಕಂಡಿದ್ದೇನೆ. ಒಂದೇ ವ್ಯತ್ಯಾಸವೆಂದರೆ ಆತನ ಇರುವಿಕೆಯನ್ನು ಇನ್ನಷ್ಟು ತೀವ್ರವಾಗಿ ಅನುಭವಿಸಿದ್ದೇನೆ' ಎಂದರು.



ಕಟ್ಟಕಡೆಗೂ, ದೇವರು ಇದ್ದಾನೆಂಬುದನ್ನು ತಮ್ಮದೇ ಅನುಭವದಿಂದ ಖಾತ್ರಿಗೊಳಿಸುವ ವ್ಯಕ್ತಿಯೊಬ್ಬರು ನರೇಂದ್ರರಿಗೆ ಲಭ್ಯವಾಗಿದ್ದರು. ದೇವರ ಇರುವಿಕೆ ಬಗೆಗಿನ ಅವರ ಶಂಕೆ ಕರಗಿಹೋದ ಕ್ಷಣ ಅದಾಗಿತ್ತು. ನರೇಂದ್ರನಾಥರ ಮಹೋನ್ನತ ಸಾಧನೆಯ ಹಾದಿಯ ಆರಂಭವೂ ಅದೇ ಆಗಿತ್ತು. ರಾಮಕೃಷ್ಣರು ಹಾಗೂ ನರೇಂದ್ರರ ನಡುವೆ ಆ ನಂತರ ನಡೆದ ಹಲವಾರು ಭೇಟಿಗಳಿಗೆ ಇದು ನಾಂದಿಯಾಯಿತು. ಇದಾದ ಕೆಲವೇ ಸಮಯದಲ್ಲಿ ನರೇಂದ್ರರಿಗೆ ರಾಮಕೃಷ್ಣರ ಆಧ್ಯಾತ್ಮಿಕ ಸಾಧನೆಯ ಮಹತ್ವ ಅರ್ಥವಾಗಿ, ಅವರ ಅಪ್ಪಟ ಅನುಯಾಯಿಯಾದರು.

◆